ಚಾಮುಂಡೇಶ್ವರಿ ವಿದ್ಯುತ್ ಸರಬರಾಜು
ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ಉಪವಿಭಾಗ-2ರ ಕಛೇರಿ
ಚಾವಿಸನಿನಿ,ಕೆ.ಆರ್.ಪೇಟೆ- 571426
Telephone No: 9449598660

**CHAMUNDESHWARI ELECTRICITY SUPPLY CORPORATION LIMITED**
*(A Government of Karnataka Undertaking)*
Subdivision-2 Office,
CESC, K R Pet-571426
Web Site:cescmysore.karnataka.gov.in
E-mail ID:aeekrpet2@cescmysore.org

**Company Identity Number[CIN]:- U40109KA2004SGC035177**

ಕ್ರಮಾಂಕ:ಸಕಾನಿಇಂ(ವಿ)/ಸಇಂ(ತಾಂ)/2020-21/ 1499 ದಿನಾಂಕ: 04/01/2022

ವಿಷಯ: ದಿನಾಂಕ:- 29.12.2021 ರಂದು ಕೆ.ಆರ್.ಪೇಟೆ ಉಪವಿಭಾಗ-2ರ ಜನಸಂಪರ್ಕಸಭೆಯನ್ನು ಮಾನ್ಯ ಕಾರ್ಯನಿರ್ವಾಹಕ ಇಂಜಿನಿಯರ್ (ವಿ)ರವರ ಅಧ್ಯಕ್ಷತೆಯಲ್ಲಿ ಮಧ್ಯಾಹ್ನ 02:30 ರಿಂದ 05:00 ರವರೆಗೆ ಕೆ.ಆರ್.ಪೇಟೆ-2 ಉಪವಿಭಾಗೀಯ ಕಛೇರಿಯಲ್ಲಿ ನಡೆಸಿ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಲಾಯಿತು.

ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು.

ಶ್ರೀಮತಿ ಪ್ರತಿಭಾ ಬಿ.ಎ ಕಾರ್ಯನಿರ್ವಾಹಕ ಇಂಜಿನಿಯರ್(ವಿ)ಕೆ.ಆರ್.ಪೇಟೆ ವಿಭಾಗ
ಶ್ರೀ ಎಸ್.ವಿ ಕೃಷ್ಣ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)ಉಪವಿಭಾಗ-2
ಶ್ರೀ ಭಾಸ್ಕರಚಾರಿ ಎ.ಎಸ್ ಸಹಾಯಕಇಂಜಿನಿಯರ್(ತಾಂತ್ರಿಕ)
ಶ್ರೀ ಕೆ.ಆರ್ ಮನುಕುಮಾರ್ ಸಹಾಯಕಇಂಜಿನಿಯರ್ ಪಟ್ಟಣ ಶಾಖೆ
ಶ್ರೀ ಶ್ರೀಧರ್ ಶಾಖಾಧಿಕಾರಿಗಳು ಮಂದಗೆರೆ
ಶ್ರೀ ಕೆ.ಟಿ.ಕೃಷ್ಣೇಗೌಡ ಶಾಖಾಧಿಕಾರಿಗಳು ಕಿಕ್ಕೇರಿ
ಶ್ರೀ ರವೀಂದ್ರಕುಮಾರ್ ಎಂ.ವಿ ಶಾಖಾಧಿಕಾರಿಗಳು ಸಂತೇಬಾಚಹಳ್ಳಿ

| ಸಭೆಗೆ ಹಾಜರಿದ್ದ ಗ್ರಾಹಕರಿಂದ ಪಡೆದ ದೂರುಗಳು | ಸಂಬಂಧಪಟ್ಟ ಅಧಿಕಾರಿ /ಶಾಖೆ | ಹಿರಿಯ ಅಧಿಕಾರಿಗಳು ದೂರುಗಳಿಗೆ ಸ್ಥಳದಲ್ಲಿ ನೀಡಿದ ಉತ್ತರಗಳು ಮತ್ತು ಸೂಚನೆಗಳು |
|---|---|---|
| 1.ರಾಜಣ್ಣ ಕೃಷ್ಣಾಪುರ (ಫೋನ್ ನಂ-9741058852) ದೂರು: ಮಂದಗೆರೆ ಹಾಗೂ ಕಿಕ್ಕೇರಿ ಶಾಖೆಯಲ್ಲಿ ನೌಕರರ ಕೊರತೆಯಿರುವುದರಿಂದ ತೊಂದರೆಗಳನ್ನು ಸಕಾಲದಲ್ಲಿ ಪರಿಹರಿಸಲು ಸಾಧ್ಯವಾಗುತ್ತಿಲ್ಲದ ಕಾರಣ ಹೆಚ್ಚಿನ ನೌಕರರುಗಳನ್ನು ನಿಯೋಜಿಸುವಂತೆ ಕೋರಿರುತ್ತಾರೆ. | ಶ್ರೀ.ಕೃಷ್ಣೇಗೌಡ ಕೆ.ಟಿ ಶಾಖಾಧಿಕಾರಿಗಳು ಕಿಕ್ಕೇರಿ & ಮಂದಗೆರೆಶಾಖೆ | ಸದರಿಯವರ ಮನವಿಯನ್ನು ಶಾಖಾಧಿಕಾರಿಗಳಿಂದ ಮಾಹಿತಿ ಪಡೆದು ಮೇಲಾಧಿಕಾರಿಗಳಿಗೆ ಲಿಖಿತ ರೂಪದಲ್ಲಿ ತಿಳಿಸಲಾಗುವುದೆಂದು ಸಭೆಯಲ್ಲಿ ತಿಳಿಸಲಾಯಿತು |
| 2. ಮಂಜಣ್ಣ ಹೊಡಕಹಳ್ಳಿ (ಫೋನ್ ನಂ-9591168119) ದೂರು: ಮಳೆ, ಗಾಳಿಯಿಂದ ಹಾನಿಗೊಳಗಾದ ಕಂಬಗಳನ್ನು ತಡಮಾಡದೇ ಮಾಹಿತಿಯನ್ನು ತಿಳಿಸಿ ಅಂದಾಜುಪಟ್ಟಿ ತಯಾರಿಸಿ ವಿಭಾಗೀಯ ಕಛೇರಿಗೆ ತಲುಪಿಸಿದ ತಕ್ಷಣ ಕಾಮಗಾರಿ ಕೈಗೆತ್ತಿಕೊಳ್ಳುವಂತೆ ಕೋರಿರುತ್ತಾರೆ. | ಶ್ರೀ.ಕೃಷ್ಣೇಗೌಡ ಕೆ.ಟಿ ಶಾಖಾಧಿಕಾರಿಗಳು ಕಿಕ್ಕೇರಿಶಾಖೆ | ಅಂದಾಜುಪಟ್ಟಿಗಳನ್ನು ವಿಭಾಗೀಯ ಕಛೇರಿಗೆ ತಲುಪಿಸಿದ ತಕ್ಷಣ ಆದ್ಯತೆಯ ಮೇರೆಗೆ ಕಾಮಗಾರಿ ಕೈಗೆತ್ತಿಕೊಳ್ಳಲು ಕ್ರಮವಹಿಸಲಾಗುವುದೆಂದು ತಿಳಿಸಲಾಯಿತು. |
| 3. ಶ್ರೀ. ಪ್ರಕಾಶ್ ಲಕ್ಷ್ಮೀಪುರ (ಫೋನ್ ನಂ 9844549766 ದೂರು: ಲಕ್ಷ್ಮೀಪುರ ಗ್ರಾಮಕ್ಕೆ ಶಿಥಿಲಗೊಂಡಿರುವ ಕಂಬಗಳನ್ನು ಬದಲಾಯಿಸಿದೆ ಆದರೆ ವೈರನ್ನು ಬದಲಾಯಿಸಿರುವುದಿಲ್ಲ ಆದ್ದರಿಂದ ತಕ್ಷಣ ವೈರ್ ಬದಲಾಯಿಸಲು ಕ್ರಮ ಕೈಗೊಳ್ಳುವಂತೆ ಕೋರಿರುತ್ತಾರೆ | ಶ್ರೀ.ಕೃಷ್ಣೇಗೌಡ ಕೆ.ಟಿ ಶಾಖಾಧಿಕಾರಿಗಳು ಕಿಕ್ಕೇರಿಶಾಖೆ | ಸದರಿ ಕಾಮಗಾರಿಗೆ ಸಂಬಂಧಪಟ್ಟಂತೆ ಕಡತವನ್ನು ಪರಿಶೀಲಿಸಿ ಕಾಮಗಾರಿಗೆ ಬೇಕಾಗಬಹುದಾದ ವಾಹಕವನ್ನು ಆದ್ಯತೆ ಮೇರೆಗೆ ವಿತರಿಸಲು ಕ್ರಮವಹಿಸಲಾಗುವುದೆಂದು ತಿಳಿಸಲಾಯಿತು. |

| | | |
|---|---|---|
| 4.ಶ್ರೀ. ಮಧು ಕೆ.ಆರ್.ಪೇಟೆ (ಫೋನ್ ನಂ–9964760473) ದೂರು: ಮಾಪಕಗಳು ಕೆ.ಆರ್.ಪೇಟೆಯಲ್ಲಿ ಲಭ್ಯವಾಗುತ್ತಿಲ್ಲದ ಕಾರಣ ತಕ್ಷಣ ಪ್ರತಿದಿನ ಮಾಪಕ ದೊರೆಯುವಂತೆ ಔಟ್‌ಲೆಟ್ ತೆರೆಯಬೇಕು ಹಾಗೂ ಅಭಿವೃದ್ಧಿ ಶುಲ್ಕವನ್ನು ಪಡೆಯದೇ ವಿದ್ಯುತ್ ಸರಬರಾಜು ನೀಡಬೇಕೆಂದು ಕೋರಿರುತ್ತಾರೆ. | ಮನುಕುಮಾರ್ ಕೆ.ಆರ್ ಶಾಖಾಧಿಕಾರಿಗಳು ಪಟ್ಟಣಶಾಖೆ | ಮಾಪಕಗಳು ಕೆ.ಆರ್.ಪೇಟೆ ವಿಭಾಗೀಯ ಕಛೇರಿಯಲ್ಲಿ ವಾರದ 7 ದಿವಸವು ದೊರೆಯುವಂತೆ ಔಟ್‌ಲೆಟ್ ತೆರೆಯಲು ಕ್ರಮವಹಿಸಲಾಗುವುದೆಂದು ತಿಳಿಸಲಾಯಿತು ಹಾಗೂ ಅಭಿವೃದ್ಧಿ ಶುಲ್ಕದ ಬಗ್ಗೆ ನಿಗಮದ ನಿಯಾಮನುಸಾರ ಕ್ರಮವಹಿಸಲಾಗುವುದೆಂದು ತಿಳಿಸಲಾಯಿತು. |
| 5.ಪ್ರೇಮ್‌ಕುಮಾರ್ (ಫೋನ್ ನಂ 9964242427) ದೂರು: ಕೆ.ಆರ್.ಪೇಟೆ ಪಟ್ಟಣದಲ್ಲಿ ಇರುವ ಹಳೆ ಕಂಬಗಳನ್ನು ತೆರವುಗೊಳಿಸುವಂತೆ ತಿಳಿಸಲಾಯಿತು | ಮನುಕುಮಾರ್ ಕೆ.ಆರ್ ಶಾಖಾಧಿಕಾರಿಗಳು ಪಟ್ಟಣಶಾಖೆ | ಕೆ.ಆರ್.ಪೇಟೆ ಪಟ್ಟಣದಲ್ಲಿ ಐಪಿಡಿಎಸ್ ಕಾಮಗಾರಿ ಮುಗಿಸಿ ಹಳೆ ಕಂಬಗಳನ್ನು ತೆರವುಗೊಳಿಸದೇ ಇರುವ ಕಂಬಗಳನ್ನು ತೆರವುಗೊಳಿಸಲಾಗುವುದೆಮದು ತಿಳಿಸಲಾಯಿತು. |
| 6.ಲಿಂಗರಾಜು ಕಾಳೇನಹಳ್ಳಿ (ಫೋನ್ ನಂ 9591792979) ದೂರು: 2019 ರಲ್ಲಿ ಕಾರ್ಯಾದೇಶ ನೀಡಿರುತ್ತಾರೆ ಕಂಬಗಳನ್ನು ನೀಡಿರುತ್ತೀರಿ ಆದರೆ ವೈರನ್ನು ನೀಡಿರುವುದಿಲ್ಲ ತಕ್ಷಣವೇ ವೈರ್ ನೀಡುವಂತೆ ಕೋರಿರುತ್ತಾರೆ. | ಶ್ರೀಧರ ಶಾಖಾಧಿಕಾರಿಗಳು ಮಂದಗೆರೆಶಾಖೆ | ಸದರಿ ಕಾಮಗಾರಿಗೆ ಸಂಬಂಧಪಟ್ಟಂತೆ ಕಡತವನ್ನು ಪರಿಶೀಲಿಸಿ ಕಾಮಗಾರಿಗೆ ಬೇಕಾಗಬಹುದಾದ ವಾಹಕವನ್ನು ಆದ್ಯತೆ ಮೇರೆಗೆ ವಿತರಿಸಲು ಕ್ರಮವಹಿಸಲಾಗುವುದೆಂದು ತಿಳಿಸಲಾಯಿತು. |

(ವೆ.ವಿ.ಕೃಷ್ಣ)
ಸಹಾಯಕ ಕಾರ್ಯಪಾಲಕ ಇಂಜಿನಿಯರ್(ವಿ)
ಕಾರ್ಯ ಮತ್ತು ಪಾಲನ ಉಪವಿಭಾಗ–2
ಚಾವಿಸನಿನಿ ಕೆ ಆರ್ ಪೇಟೆ